ಶ್ರೀ ಸಿ.ಆರ್. ಸಗೀರ ಅಹಮದ್ (ವಸತಿ ಸಚಿವರು)

ಅ. 2000-2001 ಹಾಗೂ 2001-2002 ನೇ ಸಾಲಿನಲ್ಲಿ ಮಂಡಳಿಯು ರಾಜ್ಯದಲ್ಲಿ ನಿರ್ಮಿಸಿರುವ ಒಟ್ಟು ಮನೆಗಳ ಸಂಖ್ಯೆ 6306. ಈ ಮನೆಗಳ ನಿರ್ಮಾಣಕ್ಕೆ ತಗಲಿರುವ ಒಟ್ಟು ವೆಚ್ಚ 3276.10 ಲಕ್ಷ ರೂ.ಗಳು

ಆ. ಈ ಹಣವನ್ನು ಶೇ. 80 ರಂತೆ ಹುಡ್ಕೋ ಸಂಸ್ಥೆಯಿಂದ ಸಾಲವನ್ನಾಗಿಯೂ ಹಾಗೂ ಉಳಿದ ಶೇ. 20 ರಷ್ಟು ಹಣವನ್ನು ರಾಜ್ಯ ಸರ್ಕಾರದ ಅನುಧಾನದ ಮೂಲಕ ಸಂಗ್ರಹಿಸಿದೆ.

ಇ. ಮಂಡಳಿಯು 2000-2001 ಮತ್ತು 2001-2002ನೇ ಸಾಲಿಗೆ ಬಿಜಾಪುರ ಜಿಲ್ಲೆಗೆ ಮಂಜೂರು ಮಾಡಿದ ಮನೆಗಳ ಸಂಖ್ಯೆ 200, ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತೆ ಇರುತ್ತದೆ.

ಕ್ರಮ ಸಂ	ವರ್ಷ	ಯೋಜನೆ ವಿವರ/ವಿಧಾನಸಭಾವಾರು	ಮನೆಗಳ ಸಂಖ್ಯೆ
1.	2000-02	ಸಿಂದಗಿ (ಹಂತ-I)	50
2.	2001-02	ಮುದ್ದೋಳ 50	
		ಸೌದತ್ತಿ	50
		ಸಿಂದಗಿ (ಹಂತ-II)	50
		ಒಟ್ಟು	**200**

ಈ. ಅಲಮಟ್ಟಿ ಯೋಜನೆಯಡಿ ಮುಳುಗಡೆಯಾಗಿರುವ ಪ್ರದೇಶದ ಬಾಗಲಕೋಟೆ ನಗರದ ಕೊಳಚೆ ನಿವಾಸಿಗಳಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿವತಿಯಿಂದ ಮೊದಲನೆ ಹಂತದಲ್ಲಿ ವಾಂಬೆ ಯೋಜನೆಯಡಿ 163 ಮನೆಗಳನ್ನು ಎರಡನೇ ಹಂತದಲ್ಲಿ 1000 ಮನೆಗಳನ್ನು ತೆಗೆದುಕೊಳ್ಳಲಾಗಿದ್ದು. ಈಗ 163 ಮನೆಗಳು ನಿರ್ಮಾಣ ಹಂತದಲ್ಲಿದೆ.

ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬವಣೆ

1456(1568) ಶ್ರೀ ಚಲುವರಾಯ ಸ್ವಾಮಿ ಎನ್. (ನಾಗಮಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿ ನೀರಿನ ಸಂಪನ್ಮೂಲವಿಲ್ಲದೇ ನಿಂತಿರುವ ಹಳ್ಳಿಗಳು ಎಷ್ಟು; ಹಾಗೂ ನಾಗಮಂಗಲ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿದ್ದು ವಿಶೇಷ ಯೋಜನೆಯಡಿಯಲ್ಲಿ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಲಾಗುವುದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ. ನಾಗಮಂಗಲ ತಾಲ್ಲೂಕಿನ (ಮಾವಿನಕಟ್ಟೆಕೊಪ್ಪಲು-ಮೋಳೆ-ದಂಡೇಬಾಲ, ವಡ್ಡರಹಳ್ಳಿ-ದಾಸರಹಳ್ಳಿ, ತಿರುಮಲಪುರ-ಬೀಚನಹಳ್ಳಿ, ಅಡಕತನಹಳ್ಳಿ, ಚೊಟ್ಟಕ್ಯಾತನಹಳ್ಳಿ, ತಟ್ಟೆಕರೆ, ಎ.ಶ್ರೀರಾಮನಹಳ್ಳಿ, ಚೌಡಗೋನಹಳ್ಳಿ-ಗೂಡೇಹೊಸಹಳ್ಳಿ, ಹದಂಗೆರೆ, ಗಿಡಿವಿನಹೊಸಹಳ್ಳಿ-ಗಿಡುವಿನಹೊಸಹಳ್ಳಿ ಕೊಪ್ಪಲು, ಭದ್ರೇಗೌಡನಕೊಪ್ಪಲು, ಅಡವೀಕಟ್ಟೆ,

ವಡ್ಡರಹಳ್ಳಿ-ಲಕ್ಷ್ಮಿಪುರ, ಬದ್ರೀಕೊಪ್ಪಲು, ದರವಯ್ಯನಕೊಪ್ಪಲು) 15 ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು ಸೂಕ್ತ ಜಲಮೂಲ ಲಭ್ಯವಾಗಿಲ್ಲದಿರುವುದರಿಂದ. ಯೋಜನೆ ಕಾರ್ಯಗತ ವಾಗಿರುವುದಿಲ್ಲ ಆದುದರಿಂದ ಪರ್ಯಾಯ ಜಲಮೂಲಗಳ ಅನ್ವೇಷಣೆಯನ್ನು ಆದ್ಯತೆ ಮೇಲೆ ಮಾಡಲಾಗುತ್ತಿದೆ.

ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳ ಹಾಗೂ ಶಿಕ್ಷಕರ ಸಂಖ್ಯೆ

1457(1571) ಶ್ರೀ ಎಂ. ಚಂದ್ರಪ್ಪ (ಭರಮಸಾಗರ): ಮಾನ್ಯ ಪ್ರಾಥಮಿಕ ಹಾಗೂ ಪೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳ ಹಾಗೂ ಶಿಕ್ಷಕರ ಸಂಖ್ಯೆ ಎಷ್ಟು; ಹಾಗೂ ಜನವರಿ 2003ರ ಅಂತ್ಯಕ್ಕೆ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು; (ಅನುದಾನಿತ ಖಾಸಗಿ ಸರ್ಕಾರಿ ಶಾಲೆಗಳ ವಿವರ ಪ್ರತ್ಯೇಕವಾಗಿ ನೀಡುವುದು);

ಆ. ಮಾನ್ಯ ರಾಜ್ಯಸಭಾ ಸದಸ್ಯರಾಗಿರುವ ಡಾ. ರಾಜಾರಾಮಣ್ಣ ಸಮಿತಿಯ ವರದಿಯನ್ನು 2001-02ನೇ ಸಾಲಿನಲ್ಲಿ ಜಾರಿಗೆ ತರುವುದರ ಬಗ್ಗೆ ಘೋಷಣೆ ಮಾಡಿದ್ದು ಅದು ಕಾರ್ಯರೂಪಕ್ಕೆ ಬಾರದೇ 2003-04ನೇ ಸಾಲಿಗೆ ಜಾರಿಗೆ ತರುವುದರ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುವುದೆ;

ಇ. ಮಾನ್ಯ ಶ್ರೀ. ರಾಜಾರಾಮಣ್ಣ ಸಮಿತಿಯ ವರದಿಯಲ್ಲಿ ಪ್ರಾಥಮಿಕ ಶಾಲೆಗೆ 5ನೇ ತರಗತಿಯನ್ನು ಮಾಧ್ಯಮಿಕ ಶಾಲೆಗೆ 8ನೇ ತರಗತಿಯನ್ನು ಮತ್ತು ಪ್ರಾಥಮಿಕ ಶಾಲೆಗೆ ಟಿ.ಸಿ.ಹೆಚ್ ತರಬೇತಿ ಹಾಗೂ ಮಾಧ್ಯಮಿಕ ಶಾಲೆಗೆ ಬಿ.ಎಡ್ ಆಗಿರುವ ಶಿಕ್ಷಕರನ್ನು ನೇಮಿಸುವ ಬಗ್ಗೆ ಶಿಫಾರಸ್ಸು ಮಾಡಲಾಗಿದೆಯೆ;

ಈ. ಈ ವರದಿಯನ್ನು ಜಾರಿಗೆ ತರದಿದ್ದಲ್ಲಿ ಸರ್ಕಾರ ಈ ಸಮಿತಿಯನ್ನು ರಚಿಸಿದ್ದು ವ್ಯರ್ಥವಲ್ಲವೇ?

ಪ್ರೋ. ಬಿ. ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ: 48,716, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ: 2,09,837..

ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳ ಸಂಖ್ಯೆ: 2428. ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ: 17,498.

ಜನವರಿ 2003ರ ಅಂತ್ಯಕ್ಕೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ ಖಾಲಿ ಇರುವ ಶಿಕ್ಷಕರ ಹುದ್ದೆಗಳು: 7811. ಹಾಗೂ ಖಾಸಗಿ ಅನುದಾನಿತ ಶಾಲೆಗಳಲ್ಲಿ: 585.

ಆ. ಡಾ. ರಾಜಾರಾಮಣ್ಣ ಸಮಿತಿಯ ವರದಿಯಲ್ಲಿ ಮಾಡಿರುವ 24 ಶಿಫಾರಸ್ಸುಗಳಲ್ಲಿ ಈವರೆಗೆ 17 ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆ. ಉಳಿದ 7 ಶಿಫಾರಸ್ಸುಗಳನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಇ. ಹೌದು.

ಪಿಯುಸಿ ಯೊಂದಿಗೆ ಟಿ.ಸಿ.ಹೆಚ್ ತರಬೇತಿ ಹೊಂದಿದಂತಹವರನ್ನು ಪ್ರಾಥಮಿಕ ಶಿಕ್ಷಕರನ್ನಾಗಿ ನೇಮಿಸಲು ಶಿಫಾರಸ್ಸು ಮಾಡಲಾಗಿದೆ. ಆದರೆ ಮಾಧ್ಯಮಿಕ ಶಾಲೆಗೆ ಬಿ.ಎಡ್ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ವರದಿಯಲ್ಲಿ ಶಿಫಾರಸ್ಸು ಮಾಡಿರುವುದಿಲ್ಲ.